ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗಾಗಲೇ ಸುಮಾರು 150ಕ್ಕೂ ಮೇಲ್ಪಟ್ಟು ಅಂತಹ ಕಲಾವಿದರಿಗೆ ಮಾಸಾಶನ ಕೊಡುತ್ತ ಇದ್ದೇವೆ. ಅಲ್ಲದೆ ಸಂಗೀತ ನಾಟಕ ಅಕಾಡೆಮಿಯವರು ಪ್ರತಿ ವರ್ಷ, ವರ್ಷಕ್ಕೆ ಹತ್ತು ಜನರಂತೆ ಈಗಾಗಲೇ 6-7 ವರ್ಷಗಳಿಂದ ಅವರಿಗೆ ಪ್ರಶಸ್ತಿಗಳನ್ನು ನೀಡುತ್ತಾ ಇದ್ದಾರೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಈ ನಾಟಕ ಕಂಪೆನಿಗಳು ಪ್ರತಿ ವರ್ಷ ಒಂದೊಂದಾಗಿ ದಿವಾಳಿತನದಿಂದ ಹೊರಗುಳಿಯುತ್ತಾ ಇವೆ. ಅದರ ಬಗ್ಗೆ ಏನಾದರೂ ಅಂಕಿ ಅಂಶ ಇಟ್ಟುಕೊಂಡಿದ್ದೀರಾ? ಮತ್ತು ಈ ನಾಟಕ ಕಂಪೆನಿಗಳು ಕಲಾವಿದರನ್ನು ತರಬೇತು ಮಾಡಕಕ್ಕೆ ಕೇಂದ್ರಗಳಾಗಿರುವುದರಿಂದ ಕೊನೆ ಪಕ್ಷ ನೂರು ನಾಟಕಗಳನ್ನು ಬೇರೆ ಬೇರೆ ಕಡೆ 25 ಸ್ಥಳಗಳಲ್ಲಿ ಪ್ರದರ್ಶನ ಮಾಡಿದ್ದರೆ ಅಂತಹವರಿಗೆ ಸನಿಮಾದವರಿಗೆ ಕೊಡುವಂತ ಸಂಭಾವನೆ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಕಂಪೆನಿಯವರ ಸ್ಥಿತಿ ಕಷ್ಟವಾಗಿರುವುದು ಬರೀ ಹೊಸಕಾಸಿನ ಪರಿಸ್ಥಿತಿಯಿಂದ ಎಂದು ಹೇಳಲಕ್ಕೆ ಬರುವುದಿಲ್ಲ. ಒಳ್ಳೆಯ ನಾಟಕ ಕಂಪೆನಿಗಳು ಇವತ್ತಿಗೂ ಕೂಡ ಗಾಯನ ಮತ್ತು ನಗರವಲ್ಲೂ ಸಹ ಹೆಚ್ಚು ಜನಾಕರ್ಷಣೆಯನ್ನು ಪಡೆದಿದ್ದು ಪಡೆಯುತ್ತಾ ಇವೆ. ರಾಷ್ಟ್ರೀಯ ಮನೋಭಾವ ಬರಕಕ್ಕೆ ರಾಷ್ಟ್ರೀಯ ತತ್ವಜ್ಞಾನಿರತಕ್ಕೆ ಹರಿಜನೋದ್ಧಾರ ಮತ್ತು ಭಾವೈಕ್ಯತೆಗೆ ಸಂಬಂಧಪಟ್ಟ ವಿಷಯಗಳ ಮೇಲೆ ನಾಟಕಗಳನ್ನು ಮತ್ತು ಸ್ಕ್ರಿಪ್ಟ್‌ನ್ನು ಬರೆಸಿ ಅವನ್ನು ತಜ್ಞರಿಂದ ಪರಿಶೀಲನೆ ಮಾಡಿಸಿ ನಾಟಕ ಕಂಪೆನಿಯವರು ಆ ನಾಟಕಗಳನ್ನು ಆಡುವುದಕ್ಕೆ ಒಂದು ಅನುಕೂಲತೆ ಮಾಡಿಕೊಟ್ಟು ಯಾವ ಕಂಪೆನಿಗಳವರು ಆ ನಾಟಕಗಳನ್ನು ಆಡುತ್ತಾರೋ ಅವರಿಗೆ ಪ್ರತಿವಿನಿತ್ಯ 150 ರೂಪಾಯಿಗಳು ಮತ್ತು ಬೆಂಗಳೂರು ನಗರದಲ್ಲಿ ಆಡಿದರೆ 7 ಸಾವಿರ ರೂಪಾಯಿಗೆ ಹೆಚ್ಚಾಗದಂತೆ, ಗ್ರಾಮೀಣ ಪ್ರದೇಶದಲ್ಲಾದರೆ 5 ಸಾವಿರ ರೂಪಾಯಿಗಳಿಗೆ ಹೆಚ್ಚಾಗದಂತೆ ಸಹಾಯ ಮಾಡಬೇಕೆಂಬ ಒಂದು ಯೋಜನೆ ಸಿದ್ಧವಾಗಿದೆ, ಅದು ಮಂತ್ರಿಮಂಡಲದ ಪರಿಶೀಲನೆಯಲ್ಲಿ ಇದೆ.

ಶ್ರೀ ಬಸವರಾಜ ಕಟ್ಟೀಮನೆ.—ಸುರಾಮ್ಯತ ಮತ್ತು ಅಧ್ಯಾರಾಮ್ಯತ ಇವುಗಳನ್ನು ಸೇವೆ ಮಾಡಿ ತರುಣರು ತಮ್ಮ ತಾರುಣ್ಯದಲ್ಲಯೇ ಮುಪ್ಪಾದವರಿಗೂ ನಿವೃತ್ತಿ ವೇತನ ಅಥವಾ ಸಹಾಯ ಮಾಡತಕ್ಕ ಅಂಶವನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದು ಮಾನ್ಯ ಸದಸ್ಯರ ಅಭಿಪ್ರಾಯ.

ಶ್ರೀ ಕೆ. ಚನ್ನಬಸವನಗೌಡ.—ಹಿಂದೆ ಬಯಲಾಟ ಮತ್ತು ದೊಡ್ಡಾಟ ಇವುಗಳಿಗೆ ಆ ಸಂಸ್ಥೆಯ ಪ್ರಚಾರ ಇಲಾಖೆಯವರು ಸಹಾಯ ಧನವನ್ನು ಹಳ್ಳಿಹಳ್ಳಿಗೂ ನೀಡುತ್ತಿದ್ದರು. ಈಗಲೂ ಅದೇ ರೀತಿ ಸಹಾಯವನ್ನು ಕೊಡತಕದ್ದನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರದವರು ಈಗ ಯಕ್ಷಗಾನ, ಬಯಲಾಟ ಇತ್ಯಾದಿ ಎಲ್ಲಾ ಕಲೆಗಾರರನ್ನೂ ಸೇರಿಸಿ ಒಂದು ಸ್ವಧರ್ಯನ್ನು ಏರ್ಪಡಿಸಿದ್ದಾರೆ. ಅದರಲ್ಲಿ ವಿಜಯಶಾಲಿಗಳಾದವರಿಗೆ ಬಹುಮಾನ ವಿತರಣೆಯನ್ನು ಮಾಡತಕ್ಕ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ.

SHORT NOTICE QUESTIONS AND ANSWERS

Closure of Siddeswara Textile Mills, Davangere

7. Sri A. H. SHIVANANDASWAMY (Elected by L. A.).—

Will the Minister for Law, Labour and Parliamentary Affairs be pleased to state :—

(a) whether it is a fact that Sree Siddeswara Textile Mills (Private) Limited, Davangere has been closed down recently due to Labour trouble ;

(SRI A. H. SHIVANANDA SWAMY)

(*b*) the number of workers that have gone on strike ;

(*c*) whether it has resumed production ?

Sri K. PUTTASWAMY.—(Minister for Law, Labour and Parliamentary Affairs).—

(*a*) Yes.

(*b*) About 1,000 workers.

(*c*) The Mills is partially working with about 200 workers.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ದಾವಣಗೆರೆಯಲ್ಲಿರತಕ್ಕ ಸಿದ್ದೇಶ್ವರ ಬಟ್ಟೆ ಗಿರಣಿಯಲ್ಲಿ ಕೆಲಸಗಾರರು ಕೆಲಸ ನಿಲ್ಲಿಸಿ ಎಷ್ಟು ದಿನಗಳಾಯಿತು ?

Sri K. PUTTASWAMY.—The workers went on strike on 25th June 1969.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ವಿವಾದವನ್ನು ಬಗೆಹರಿಸುವುದಕ್ಕಾಗಿ ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳೇನು ?

Sri K. PUTTASWAMY.—That is given in the reply to the question. The Government have referred the dispute for adjudication on 23rd July 1969 and have prohibited the strike.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—1 ಸಾವಿರಜನ ಕೆಲಸಗಾರರಲ್ಲಿ ಕೇವಲ 200 ಜನ ಮಾತ್ರ ಕೆಲಸಕ್ಕೆ ಹೋಗದೆ ನಿಂತಿದ್ದಾರೆ. ಅವರನ್ನೂ ಏಕೆ ಕೆಲಸಕ್ಕೆ ಬರಮಾಡಿಕೊಳ್ಳಬಾರದು ?

Sri K. PUTTASWAMY.—The workers are to return to work. There is no impediment for their returning to work.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಅಲ್ಲಿ ಕೆಲಸ ನಡೆಯದೆ ನಿಲ್ಲಲು ಕಾರಣವೇನು ?

Sri K. PUTTASWAMY.—The workers have not returned to duty.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಅಲ್ಲಿ ನಿತ್ಯವೂ ಹಿಂಸಾಕೃತ್ಯಗಳು ನಡೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಬಂದಿಲ್ಲ.

Sri G. V. GOWDA.—May I know the nature of settlement between the labour and the management ?

Sri K. PUTTASWAMY.—That has been referred to adjudication.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಮುಷ್ಕರವನ್ನು ತಡೆಗಟ್ಟುವುದಕ್ಕೆ ತಕ್ಷಣ ಪ್ರಯತ್ನ ಮಾಡುತ್ತೀರಾ ?

Sri K. PUTTASWAMY.—The Government have prohibited the strike. Legally, anybody continuing on strike is committing an offence. We have not taken action against them under law. Even now I would advise the workers to return to duty.